O.S. NO. 162/2021
DW - 1 .
Dated 24-01-2025

ಸಾಕ್ಷಿಯನ್ನು ಈ ದಿನ ದಿನಾಂಕ 24-01-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಬಿ ಬಿ ಎಚ್ ವಕೀಲರಿಂದಃ

ದಾವಾ ಆಸ್ತಿಯಲ್ಲಿ ಸಧ್ಯ ಪ್ಲಾಟಗಳು ಇರುತ್ತವೆ. ಸದರಿ ಜಮಿನದಲ್ಲಿ ಒಟ್ಟು 78 ಪ್ಲಾಟಗಳು ಇದ್ದವು ಅವುಗಳಲ್ಲಿ ಕೆಲವೊಂದು ಮಾರಾಟ ಮಾಡಿದ್ದಾರೆ. ಈಗ ಎಷ್ಟು ಪ್ಲಾಟಗಳು ಉಳಿದಿವೆ ಎಂದು ನನಗೆ ಗೊತ್ತಿಲ್ಲ. ಸದರಿ ಮಾರಾಟವಾದ ಪ್ಲಾಟಗಳನ್ನು ನಾನು ಮತ್ತು ನನ್ನ ತಮ್ಮ ಬಸವಣ್ಣೆಪ್ಪ ಮಲ್ಲೇಶಪ್ಪ ನಂದಗಡ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆಯ ಆಸ್ತಿ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ನನ್ನ ತಾಯಿಯ ತಂದೆ ಮತ್ತು ಕಾಕಾ ಸೇರಿ ನನ್ನ ತಂದೆಗೆ ಭಕ್ಷಿಸ ಕೊಟ್ಟಿರುತ್ತಾರೆ. ದಾವಾ ಆಸ್ತಿ ಮೊಲು ನನ್ನ ತಂದೆ ಹೆಸರಿನಲ್ಲಿ ಇತ್ತು ಎಂದರೆ ನಿಜ. ನನ್ನ ತಂದೆ ಮೃತ ಪಟ್ಟ ನಂತರ ನಾನು ಮತ್ತು ನನ್ನ ಸಹೊದರ ವಾರಸಾ ನಾತೆಯಿಂದ ಹೆಸರು ಹಚ್ಚಿಕೊಂಡಿರುತೇವೆ ಎಂದರೆ ನಿಜ. ನಾನು ಶುಗರ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನನ್ನ ತಮ್ಮ ಮನೆಯಲ್ಲಿ ಒಕ್ಕಲುತನ ಮಾಡಿಕೊಂಡು ಇರುತ್ತಿದ್ದನು ಎಂದರೆ ಸರಿ. ನನ್ನ ತಂದೆ ಮೃತ ಪಟ್ಟ ನಂತರ ನಾನು ಮತ್ತು ನನ್ನ ತಮ್ಮ ಸೇರಿ ದಾವಾ ಜಮಿನನ್ನು ಕೃಷಿಯೇತನರ ಜಮಿನಾಗಿ ಪರಿವರ್ತಿಸಲು ಅರ್ಜಿ ಹಾಕಿಕೊಂಡಿದ್ದೇವು ಎಂದರೆ ಸರಿ. ನನ್ನ ತಮ್ಮ ನಮ್ಮ ಮೂಲ ಮನೆಯಲ್ಲಿ ವಾಸ ಇದ್ದನು ಮತ್ತು ನಾನು ಹೊಸ ಮನೆ ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸ ಇದ್ದೇನು ಎಂದರೆ ಸರಿ.

ದಾವಾ ಜಮಿನನ್ನು ನಾನು ಮತ್ತು ನ್ನನ ಸಹೊದರ ಸೇರಿ ನಿವೇಶನಗಳನ್ನಾಗಿ ಅಭಿವೃದ್ದಿ ಮಾಡಿದ್ದೇನೆ ಎಂದರೆ ಸಾಕ್ಷಿ ನಾನು ಒಬ್ಬನೇ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಭೂ ಪರಿವರ್ತನೆಗೆ ನನ್ನ ತಮ್ಮ ತನ್ನ ಹತ್ತಿರ ಇದ್ದ ಹಣ ಮತ್ತು ನನ್ನ ತಂದೆ ಕೂಡಿಟ್ಟ ಹಣ ಮತ್ತು ತನ್ನ ಹೆಂಡತಿಯ ಬಂಗಾರವನ್ನು ಮಾರಾಟ ಮಾಡಿ ಬಂದ ಹಣ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಎನ್ ಎ ಮಾಡಿಸಲು ಎಷ್ಟು ಖರ್ಚು ಮಾಡಿದ್ದೀರಿ ಎಂದರೆ ಸಾಕ್ಷಿ ನಾನು ಲೆಕ್ಕ ಬರೆದಿಟ್ಟಿಲ್ಲ ಎಂದು ನುಡಿದಿರುತ್ತಾರೆ. ನನಗೆ ಲೆಕ್ಕ ಬರೆದಿಡಲು ಯಾವುದೇ ಅಡಚಣೆ ಇರಲಿಲ್ಲ. ನಾನು ಮತ್ತು ನನ್ನ ಸಹೊದರರು ಇಬ್ಬರು ಸೇರಿ ಎನ ಎ ಪರಿವರ್ತನೆಗಾಗಿ ಹಣ ಹಾಕಿದ್ದರಿಂದ ನಾನು ಲೆಕ್ಕ ಬರೆದಿಟ್ಟಿಲ್ಲ ಎಂದರೆ ಸರಿಯಲ್ಲ. ಭೂ ಪರಿವರ್ತನಗೆ ಹರ್ಚು ನಾನೇ ಮಾಡಿದ್ದೇನೆ ಆದ್ದರಿಂದ ವಾದಿಗೆ ಯಾವುದೇ ಹಿಸ್ಸಾ ಹಕ್ಕು ಇರುವುದಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ನನ್ನ ಹೆಂಡತಿಯ ಮತ್ತು ನನ್ನ ಪಗಾರಗಳ ಮೇಲೆ ನಾನು ಬ್ಯಾಂಕ ಸಾಲ ಮಾಡಿದ್ದು ನನ್ನ ಹೊಸ ಮನೆ ಕಟ್ಟಿದ ಖರ್ಚಿಗಾಗಿ ಹೊರತು ಭೂ ಪರಿವರ್ತನೆಗಾಗಿ ಅಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮನಿಗೆ ಯಾವುದೇ ಮಕ್ಕಳು ಜನಿಸಿರುವುದಿಲ್ಲ ಎಂದರೆ ಸರಿ. ವಾರಸಾ ನಾತೆಯಿಂದ ನಾನು ಮತ್ತು ನನ್ನ ತಮ್ಮನ ಹೆಂಡತಿ - ವಾದಿ ಆಸ್ತಿಯ ಜಂಟಿ ಮಾಲಿಕರು ಆಗಿದ್ದೇವೆ ಎಂದರೆ ಸರಿ. ವಾದಿಗೆ ದಾವಾ ಆಸ್ತಿ ಯಲ್ಲಿ ಇರುವ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭೂ ಪರಿವರ್ತನೆ ಖರ್ಚಿಗೊಸ್ಕರ ನಾನು ಆಸ್ತಿ ಇಟ್ಟುಕೊಳ್ಳಬೇಕು ಅಂತಾ ನನ್ನ

O.S. NO. 162/2021

DW - 1 .

Dated 24-01-2025

ಮತ್ತು ನನ್ನ ಸಹೋದರ ಮದ್ಯೆ ಖರಾರು ಪತ್ರ ಆಗಿರುವುದಿಲ್ಲ. ನಾನು ವಾದಿಗೆ ಆಸ್ತಿ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.